[ Govt. of Karnataka C.R.P. 67]

| Deposition Sheets (RP.No.57) Form No.4 |
|---|

IN THE COURT OF Addl. CIVIL JUDGE & J.M.F.C., KARKALA.

Criminal Case No. 1567/2023

ಪಿ.ಡಬ್ಲ್ಯು : 3 ಸಿ.ಡಬ್ಲ್ಯು : 2

ಸಾಕ್ಷಿದಾರನ ಹೆಸರು : ಪ್ರಮೋದ್ ಶೆಟ್ಟಿ
ತಂದೆಯ ಹೆಸರು : ರಾಮಣ್ಣ ಶೆಟ್ಟಿ
ಪ್ರಾಯ : 41 ವರ್ಷ
ಉದ್ಯೋಗ : ಕೃಷಿ
ವಾಸ : ಸೋಮೇಶ್ವರ ನಾಡ್ಪಾಲ್

ದಿನಾಂಕ 29.06.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರು:-

ಆರೋಪಿಯನ್ನು ನೋಡಿ ಗುರುತಿಸಿರುವುದಿಲ್ಲ. ಚಾಸಾ-1 ರವರ ಪರಿಚಯ ಇಲ್ಲ. ಚಾಸಾ-3 ರವರನ್ನು ನೋಡಿರುತ್ತೇನೆ.

ಸುಮಾರು ಒಂದು ವರ್ಷದ ಹಿಂದೆ ಸೋಮೇಶ್ವರದಿಂದ ಹೆಬ್ರಿಗೆ ನನ್ನ ಬಾಬ್ತು ಬೈಕ್ ನಲ್ಲಿ ಹೋಗುತ್ತಿದ್ದಾಗ ಜಕ್ಕನಮಕ್ಕಿಯ ಹತ್ತಿರ ಟಿಪ್ಪರ್ ಮತ್ತು ಕ್ಯಾಂಟರ್ ವಾಹನಗಳ ನಡುವೆ ಅಪಘಾತವಾಗಿರುತ್ತದೆ. ಸದರಿ ರಸ್ತೆಯು ಇಕ್ಕಟ್ಟಿನ ರಸ್ತೆಯಾಗಿದ್ದು ಅಪಘಾತವಾಗಿರುತ್ತದೆ. ಸದರಿ ಅಪಘಾತದಿಂದ ಕ್ಯಾಂಟರ್ ಗಾಡಿಯ ಚಾಲಕನಿಗೆ ಕಾಲಿಗೆ ಪೆಟ್ಟಾಗಿತ್ತು. ನಾವು ಅವರನ್ನು ಹೊರತೆಗೆದು ಅಂಬ್ಯುಲೆನ್ಸ್ ನಲ್ಲಿ ಆಸ್ಪತ್ರೆಗೆ ಕಳುಹಿಸಿರುತ್ತೇವೆ. ಮರುದಿನ ಸದರಿ ಅಪಘಾತದಿಂದ ಅಂಬ್ಯುಲೆನ್ಸ್ ನಲ್ಲಿ ಕರೆದುಕೊಂಡು ಹೋದ ವ್ಯಕ್ತಿಯು ತೀರಿಹೋದ ವಿಷಯ ಗೊತ್ತಾಗಿರುತ್ತದೆ. ಸದರಿ ಅಪಘಾತಕ್ಕೆ ಏನು ಕಾರಣ ಎಂದು ಗೊತ್ತಿರುವುದಿಲ್ಲ.

ನಂತರ ಪೊಲೀಸರು ನನ್ನನ್ನು ಘಟನಾ ಸ್ಥಳಕ್ಕೆ ಬರಲು ಹೇಳಿದ್ದರು. ಸದರಿ ಸ್ಥಳದಲ್ಲಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿ ತಕ್ಷೀರು ಸ್ಥಳ ಮಹಜರು ಹಾಗೂ ಕರಡು ನಾಕಶೆಯಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸದರಿ ಮಹಜರನ್ನು ನಿಪಿ-10

ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಹಾಗೂ ಕರಡು ನಾಕಶೆಯನ್ನು ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಘಟನಾ ಸ್ಥಳದ ಸಮಯ ತೆಗೆದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-12 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರಿದು ಅಪಘಾತವು ಸದರಿ ಸ್ಥಳದಲ್ಲಿ ಆಗಿರುವುದಿಲ್ಲ ಅದರ ಮುಂದೆ ಇರುವ ತಿರುವಿನಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಅಪಘಾತಕ್ಕೊಳಪಟ್ಟ ವಾಹನಗಳ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-2 ರಿಂದ 9 ಎಂದು ಗುರುತಿಸಲಾಗಿದೆ. ಈ ಬಗ್ಗೆ ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲು</u> ಃ <u>ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ಈ ಅಪಘಾತಕ್ಕೆ 2 ವಾಹನಗಳ ಚಾಲಕ ಅತೀವೇಗ ಹಾಗುಾ ಅಜಾಗರೂಕತೆಯೇ ಕಾರಣ ಎಂದರೆ ಸರಿಯಲ್ಲ.

ದಿಃ18.06.2023 ರಂದು ಹೆಬ್ರಿ ತಾಲೂಕು ನಾಡ್ಪಾಲು ಗ್ರಾಮದ ಜಕ್ಕನಮಕ್ಕಿ ರಾಷ್ಟ್ರೀಯ ಹೆದ್ದಾರಿ 169 (ಎ) ರಸ್ತೆಯಲ್ಲಿ ನೀವು ತೋರಿಸಿಕೊಟ್ಟಂತೆ ಚಾಸಾ-4 ಮತ್ತು 5 ರವರ ಸಮಕ್ಷಮ ಚಾಸಾ- 23 ರವರು ನಿಪಿ-10 ರಂತೆ ಸ್ಥಳ ಮಹಜರು ಮಾಡಿ ಸ್ಥಳದಲ್ಲಿ ನಿಪಿ-11 ರಂತೆ ಕರಡು ನಕಾಶೆ ತಯಾರಿಸಿ ಸ್ಥಳದಲ್ಲಿಯೇ ನನ್ನ , ಚಾಸಾ-4 ಮತ್ತು ಚಾಸಾ-5 ರವರ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-12 ರಲ್ಲಿ ತೋರಿಸಿದ ಸ್ಥಳದಲ್ಲಿಯೇ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಬಗ್ಗೆ ದಿನಾಂಕ 18.06.2023

ರಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು</u> : ಆರೋಪಿ ಪರ : ಶ್ರೀ ಎಸ್ ಎಂ ಕೆ ವಕೀಲರಿಂದ ಃ

ಅಪಘಾತವಾಗಿದೆ ಎಂದು ಹೇಳುವ ಟಿಪ್ಪರ್ ವಾಹನದ ನೊಂದಾಣಿ ಸಂ. ನನಗೆ ಗೊತ್ತಿರುವುದಿಲ್ಲ. ನಿಪಿ-2 ರಿಂದ 9 ಭಾವಚಿತ್ರಗಳು ಅಪಘಾತವಾಗಿದೆ ಎಂದು ಹೇಳುವ ಸ್ಥಳದಲ್ಲಿ ತೆಗೆದ ಭಾವಚಿತ್ರಗಳು ಅಲ್ಲ ಎಂದರೆ ಸರಿ. ನಿಪಿ-11 ರಂತೆ ಅಪಘಾತವು ಹೆಬ್ರಿ ಕಡೆಯಿಂದ ಆಗಂಬೆ ಕಡೆಗೆ ಹೋಗುವ ರಸ್ತೆಯ ತಿರುವಿನ ಎಡಮೂಲೆಯಲ್ಲಿ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಅಪಘಾತವಾದ ದಿನ ತೆಗೆದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು.

ಮರುವಿಚಾರಣೆ: ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ